ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ
ನ್ಯಾಯಾಲಯದಲ್ಲಿ, ನ.ರಾ.ಪುರ.
ಸಿಸಿ ನಂ **143/2026**

ಸಿ ಡಬ್ಲ್ಯುಃ– **01**/ಪಿ ಡಬ್ಲ್ಯು ಃ-**01**

| | |
|---|---|
| ಸಾಕ್ಷಿದಾರರ ಹೆಸರು | ಃ ನಾಗರಾಜ್ |
| ತಂದೆಯ ಹೆಸರು | ಃ ಈರಪ್ಪ |
| ವಯಸ್ಸು | ಃ **43** ವರ್ಷ |
| ಉದ್ಯೋಗ | ಃ ಕೂಲಿ |
| ವಾಸಸ್ಥಳ | ಃ ಮಾವಿನಕಟ್ಟೆ |

ದಿನಾಂಕಃ **09-06-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಮುಖ್ಯವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ಮೃತ ಕೃಷ್ಣಮೂರ್ತಿ ನನ್ನ ತಮ್ಮ ಇರುತ್ತಾರೆ. ಚಾಸಾ 5 ನನ್ನ ತಂದೆ. ಚಾಸಾ-11 ನನ್ನ ಸೊಸೆ, ಚಾಸಾ-12 ನನ್ನ ತಾಯಿಯಾಗಬೇಕು. ದಿಃ 11.12.2025 ರಂದು ನನ್ನ ತಮ್ಮನಾದ ಮೃತ ಕೃಷ್ಣಮೂರ್ತಿ ಹಾಗೂ ಅಂಜನಪ್ಪ (ಚಾಸಾ-09) ರವರು ಪ್ರಸನ್ನ ಇವರು ಪ್ರಸನ್ನ ಇವರ ತೋಟಕ್ಕೆ ಅಡಿಕೆ ಕೊಯ್ಲು ಕೆಲಸಕ್ಕೆಂದು ಬಂದಿದ್ದು, ದಿಃ 12.12.2025 ರಂದು ನನ್ನ ತಮ್ಮ ಅಡಿಕೆ ಕೊಯ್ಲು ಮುಗಿಸಿ ಸಂಜೆ 04.00 ಗಂಟೆಗೆ ಟ್ರಾಕ್ಟರ್ ಗೆ ಅಡಿಕೆ ಕಾಯಿ ಮೂಟೆಗಳನ್ನು ಲೋಡ್ ಮಾಡಿಕೊಂಡು ಎನ್ ಆರ್ ಪುರದ ಗುಡ್ಡ ಹಳ್ಳಿ ಕ್ರಾಸ್ ನಿಂದ ಹೋಗುತ್ತಿರುವಾಗ ಸಂಜೆ 05.00 ಗಂಟೆಯ ನಂತರ ಸದರಿ ಟ್ರಾಕ್ಟರ್ ಚಾಲಕನು ಸದರಿ ಟ್ರಾಕ್ಟರ್ ಚಾಲನೆ ಮಾಡಿಕೊಂಡು ಹೋಗುತ್ತಿರುವಾಗ ನನ್ನ ತಮ್ಮ ಸದರಿ ಟ್ರಾಕ್ಟರ್ ನ ಟ್ರೆಲರ್ ಮೇಲೆ ಕುಳಿತಿದ್ದು, ಸದರಿ ಟ್ರಾಕ್ಟರ್ ಚಾಲಕನ್ನು ಟ್ರಾಕ್ಟರ್ ಅನ್ನು ಜೊರಾಗಿ ತಿರುವಿನಲ್ಲಿ ತೆಗೆದುಕೊಂಡು ಹೋಗಿದ್ದು, ಟ್ರಾಕ್ಟರ್ ರಸ್ತೆಯ ಬಲಭಾಗಕ್ಕೆ ವಾಲಿದ್ದು, ನನ್ನ ತಮ್ಮ ಎಡಭಾಗಕ್ಕೆ ಬಿದ್ದಿದ್ದು, ಆತನ ಮರ್ಮಾಂಗಕ್ಕೆ ಹೊಡೆತ ಬಿದ್ದಿದ್ದು, ನನ್ನ ತಮ್ಮನನ್ನು ಅಂಜನಪ್ಪ ಹಾಗೂ ಪ್ರಸನ್ನ ಇವರು ನಮ್ಮ ತಮ್ಮನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗಿ ಮಾರ್ಗ ಮಧ್ಯದಲ್ಲಿ ಮೃತ ಪಟ್ಟಿರುತ್ತಾನೆ ಎಂದು ರಾತ್ರಿ 8.00 ಗಂಟೆ ಸಮಯದಲ್ಲಿ ನನಗೆ ಚಾಸಾ-9 ರವರು ಪೋನ್ ಮಾಡಿ ತಿಳಿಸಿರುತ್ತಾರೆ.
2. ನಂತರ ನಾನು ರಾತ್ರಿ 12.00 ಸುಮಾರಿಗೆ ಎನ್ ಆರ್ ಪುರ ಸರ್ಕಾರಿ ಆಸ್ಪತ್ರೆಗೆ ಬಂದು ಆಸ್ಪತ್ರೆಯ ಶವಗಾರದಲ್ಲಿದ್ದ ನನ್ನ ತಮ್ಮನ ಮೃತ ದೇಹವನ್ನು ನೋಡಿರುತ್ತೇನೆ. ಸದರಿ ನನ್ನ ತಮ್ಮನ ತಲೆಗೆ ಸೊಂಟದ ಕೆಳಭಾಗಕ್ಕೆ ಪೆಟ್ಟಾಗಿದ್ದು, ಸದರಿ ಅಪಘಾತವು ಟ್ರಾಕ್ಟರ್ ಚಾಲಕನ ತಪ್ಪಿನಿಂದ ಆಗಿರುತ್ತದೆ ಆ ಸಂಬಂಧ ನಾನು ದೂರನ್ನು ಕೊಟ್ಟಿರುತ್ತೇನೆ. ನಂತರ ಪೋಲಿಸ್ ಠಾಣಾ ಆವರಣದಲ್ಲಿ ಟ್ರಾಕ್ಟರ್ ಅನ್ನು

ನಿಲ್ಲಿಸಿದ್ದು ಆ ಕಾಲಕ್ಕೆ ಪೋಲಿಸರು ಆರೋಪಿಯನ್ನು ತೋರಿಸಿದ್ದು, ನಾನು ಅವರನ್ನು ನೋಡಿ ಗುರುತಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

3. ಸಾಕ್ಷಿಯು ದಿಃ 13.12.2025 ರಂದು ನೀಡಿದ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿ ಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**(**ಈ ಹಂತದಲ್ಲಿ ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿಲಾಯಿತು.**)**

ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ದಿಃ 12.12.2025 ರಂದು ಸಂಜೆ 05.10 ರ ಸುಮಾರಿಗೆ ಟ್ರಾಕ್ಟರ್ ಚಾಲಕ ಟ್ರಾಕ್ಟರ್ ದುಡುಕು ಮತ್ತು ನಿರ್ಲಕ್ಷತನದಿಂದ ಚಾಲನೆ ಮಾಡಿಕೊಂಡು ಹೋಗುತ್ತಿರುವಾಗ ರಸ್ತೆ ತಿರುವಿನಲ್ಲಿ ರಸ್ತೆಗೆ ಅಡ್ಡಲಾಗಿ ನಾಯಿ ಬಂದಿದ್ದರಿಂದ ಚಾಲಕನು ಟ್ರಾಕ್ಟರ್ ಇಂಜಿನ್ ಅನ್ನು ಬಲಕ್ಕೆ ತಿರುಗಿಸಿದ್ದು, ಆಗ ಟ್ರಾಕ್ಟರ್ ಟ್ರೇಲರ್ ಎಡಕ್ಕೆ ವಾಲಿದ್ದು, ಆಗ ಟ್ರೇಲರ್ ನಲ್ಲಿದ್ದ ಅಡಿಕೆ ಮೂಟೆ ಮೇಲೆ ಕುಳಿತಿದ್ದ, ನನ್ನ ತಮ್ಮ ಕೃಷ್ಣಮೂರ್ತಿ ರಸ್ತೆಯ ಎಡಭಾಗ ಬದಿಯ ಮೇಲೆ ಬಿದ್ದಿದ್ದ ಎಂದರೆ ಸರಿ. ನಂತರ ಟ್ರಾಕ್ಟರ್ ಮಾಲೀಕರಾದ ಪ್ರಸನ್ನ ಇವರು ಟ್ರಾಕ್ಟರ್ ನ ಹಿಂದೆ ಬೈಕ್ ನಲ್ಲಿ ಹೋಗುತ್ತಿದ್ದು ನನ್ನ ತಮ್ಮ ಬಿದ್ದಿರುವುದು ನೋಡಿ ಆತನನ್ನು ಉಪಚರಿಸಿ ರಸ್ತೆಯಲ್ಲಿ ಹೋಗುತ್ತಿದ್ದ, ಒಂದು ವಾಹನದಲ್ಲಿ ಕೊಪ್ಪ ಸರ್ಕಾರಿ ಆಸ್ಪತ್ರೆಗೆ ಕರೆದುಕೊಡು ಹೋಗಿ ಚಿಕಿತ್ಸೆಗೆ ದಾಖಲು ಮಾಡಿದ್ದು, ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಕರೆದುಕೊಂಡು ಹೋಗುವಂತೆ ವೈದ್ಯರು ಹೇಳಿದ ಮೇರೆಗೆ ಕೊಪ್ಪ ಸರ್ಕಾರಿ ಆಸ್ಪತ್ರೆಯಿಂದ ಅಂಬುಲೆನ್ಸ್ ನಲ್ಲಿ ಕರೆದುಕೊಂಡು ಹೋಗುತ್ತಿರುವಾಗ ರಾತ್ರಿ 7.30 ರ ಸಮಯದಲ್ಲಿ ಮಾರ್ಗ ಮಧ್ಯದಲ್ಲಿ ನನ್ನ ತಮ್ಮ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ನಂತರ ಸದರಿ ಟ್ರಾಕ್ಟರ್ ಚಾಲನೆ ಮಾಡುತ್ತಿದ್ದವರ ಹೆಸರು ತಿಳಿಯಲಾಗಿ ಧನುಷ ಅರಳಿಕೊಪ್ಪ ಹಾಗೂ ಟ್ರಾಕ್ಟರ್ ಇಂಜಿನ್ ರಜಿಸ್ಟ್ರೇಶನ್ ನಂ.KA-18-TB-2190 ಹಾಗೂ ಟ್ರೈಲರ್ ರಜಿಸ್ಟ್ರೇಶನ್ ನಂ. KA-18-TB-2196 ಅಂತ ತಿಳಿಯಿತು ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ಶ್ರೀ **G.D** ವಕೀಲರಿಂದಃ

1. ನಾನು ದೂರನ್ನು ಕಂಪ್ಯೂಟರ್ ಸೆಂಟರ್ ನಲ್ಲಿ ಟೈಪ್ ಮಾಡಿಸಿರುತ್ತೇನೆ. ಸದರಿ ದೂರನ್ನು ಯಾವ ಕಂಪ್ಯೂಟರ್ ಸೆಂಟರ್ ನಲ್ಲಿ ಟೈಪ್ ಮಾಡಿಸಲಾಗಿರುತ್ತದೆ ಎಂದು ನಮೂದು ಇರುವುದಿಲ್ಲ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಟ್ರಾಕ್ಟರ್ ಮತ್ತು ಟ್ರೇಲರ್ ನಂಬರ್ ಗೊತ್ತಿರುವುದಿಲ್ಲ ಎಂದು ಹೇಳಿರುತ್ತೇನೆ ಎಂದರೆ ಸರಿ. ದೂರನ್ನು ನಾನು ಹೇಳಿದ ರೀತಿ ತಯಾರಿಸಿರುತ್ತಾರೆ. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿ. ಅಪಘಾತ ಸ್ಥಳದ ರಸ್ತೆಯು ಎಷ್ಟು ಅಗಲ ಇರುತ್ತದೆ ಮತ್ತು ತಿರುವು ಇರುತ್ತದೇಯೋ ಎಂಬ ಬಗ್ಗೆ ನಾನು ನೋಡಿರುವುದಿಲ್ಲ ಎಂದರೆ ಸರಿ. ಟ್ರಾಕ್ಟರ್ ಹೋಗುವಾಗ ನಾಯಿ ಅಡ್ಡ ಬಂದಿದ್ದರಿಂದ ಟ್ರಾಕ್ಟರ್ ಅನ್ನು ರಸ್ತೆಯ ಬಲಭಾಗಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಆರೋಪಿಯು ಆ ದಿನ ದುಡುಕು ಮತ್ತು ನಿರ್ಲಕ್ಷ ಮಾಡುತ್ತಿದ್ದ ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಾಮಾನ್ಯವಾಗಿ ರಸ್ತೆಯ ಮಧ್ಯದಲ್ಲಿ ಜಾನುವಾರುಗಳು, ಮನುಷ್ಯರು ಅಥವಾ ಯಾವುದೇ ವಾಹನ ಬಂದರೆ ಅವುಗಳನ್ನು ತಪ್ಪಿಸಿ ಸಂಚಾರ ಮಾಡಬೇಕೆಂದರೆ ಸರಿ. ರಸ್ತೆಯ ಮಧ್ಯ ಬರುವ ವಾಹನಗಳು ಮತ್ತು ಜಾನುವಾರಗಳನ್ನು ತಪ್ಪಿಸಿ ಚಾಲನೆ ಮಾಡಿಕೊಂಡು ಹೋಗುವುದು ಅಪರಾಧ ಆಗುವುದಿಲ್ಲ ಎಂದರೆ ಸರಿ. ಆ ದಿನ ಟ್ರಾಕ್ಟರ್ ಚಾಲಕನ ದುಡುಕುತನ ಮತ್ತು ನಿರ್ಲಕ್ಷತನ ಮಾಡುತ್ತಿದ್ದ ಎಂದು ನಾನು ಪೋಲಿಸರು ಹೇಳಿದ ರೀತಿ ದೂರಿನಲ್ಲಿ ಬರೆದಿರುತ್ತೇನೆ ಎಂದರೆ ಸರಿಯಲ್ಲ.

2. ಪೋಲಿಸರ ದೂರನ್ನು ತಯಾರಿಸಿದ ಕಾರಣ ನಾನು ಅದಕ್ಕೆ ಸಹಿ ಮಾತ್ರ ಮಾಡಿದ್ದು, ಸದರಿ ವಾಹನದ ನೊಂದಣಿ ಸಂಖ್ಯೆ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ಟ್ರಾಕ್ಟರ್ ನಿಂದ ಬಿದ್ದು, ಎಷ್ಟು ಹೊತ್ತಿಗೆ ಅಂಜನಪ್ಪ ಮತ್ತು ಪ್ರಸನ್ನ ಬಂದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಆರೋಪಿ ಆ ದಿನ ಟ್ರಾಕ್ಟರ್ ಅನ್ನು ದುಡುಕು ಮತ್ತು ನಿರ್ಲಕ್ಷತನದಿಂದ ಚಾಲನೆ ಮಾಡಿಕೊಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ಆ ದಿನ ಟ್ರೇಲರ್ ನಲ್ಲಿ ಮುಂಜಾಗ್ರತೆ ಕ್ರಮ ವಹಿಸದೇ ಕುಂತಿದ್ದು ಆತನ ತಪ್ಪಿನಿಂದ ರಸ್ತೆಗೆ ಬಿದ್ದಿರುತ್ತಾನೆ ಎಂದರೆ ಸರಿಯಲ್ಲ. ಆ ದಿನ ಟ್ರಾಕ್ಟರ್ ರಸ್ತೆಯ ಆಚೆ ಇಚೆ ಹೋಗಿರುವುದಿಲ್ಲ ಎಂದರೆ ಸರಿ. ಆ ದಿನ ನನ್ನ ತಮ್ಮನ ತಪ್ಪಿನಿಂದ ಜಾಗ್ರತವಾಗಿ ಕುಳಿತುಕೊಳ್ಳದ ಕಾರಣ ಆತನ ಟ್ರಾಕ್ಟರ್ ನಿಂದ ಬಿದಿರುತ್ತಾನೆ ಎಂದರೆ ಸರಿಯಲ್ಲ. ಚಾಸಾ9 ರವರು ಆರೋಪಿಯ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ತಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯ ನಿರ್ಲಕ್ಷತನದಿಂದ ಯಾವುದೇ ಅಪಘಾತ ಆಗದೇ ಇದ್ದರೂ ಪರಿಹಾರ ಪಡೆಯುವ

ಸಲುವಾಗಿ ಈ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪರಿಹಾರ ಕೋರಿ ಬೆಂಗಳೂರು ನ್ಯಾಯಾಲಯದಲ್ಲಿ ಅಪಘಾತ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ.

ಮರು ವಿಚಾರಣೆ ಃ ಇಲ್ಲ ಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)**

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ